ಜಾಲಪ್ಪನವರೇ, ಸಹಕಾರಿ ಸಂಘಗಳ ಕಾನೂನಿನ ೧೦೧ನೇ ಸೆಕ್ಷನ್‌ಗೆ ಏನು ಅಮೆಂಡ್‌ಮೆಂಟ್ ತಂದಿದ್ದೀರಿ, ಅದನ್ನೂ ತಗೆದುಹಾಕಿ, ಇಲ್ಲದಿದ್ದರೆ ನಿಮ್ಮ ಮೇಲೂ ಸತ್ಯಾಗ್ರಹ ಪ್ರಾರಂಭವಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ನಾನು ಯಾರನ್ನೂ ಆಲೋ ಮಾಡುವುದಿಲ್ಲ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, ಸಹಕಾರ ಕೊಡಿ. ನಾನು ಸಭೆ ನಡೆಸಬೇಕೋ ನಡೆಸಬಾರದೋ ಹೇಳಿ. ದಯವಿಟ್ಟು ಕುಳಿತುಕೊಳ್ಳಿ ಬಂಗಾರಪ್ಪನವರೇ ನೀವು ಕೊಟ್ಟಿರುವ ನಿಯಮ ೩೩೪ರ ನೋಟೀಸ್ ಓದಿ

HUNGER STRIKE BY THE TALUK DAILT ACTION COMMITTEE, CHITAPUR

SRI S BANGARAPPA.—The members of the Taluk Dalit Action Committee of Chitapur Taluk Gulbarga District, have been on hunger strike since 12-12 1985 in the premises of Taluk Office, Chittapur in protest against the attitude of the Block Development Officer and a Junior Engineer, Chitapur Block, towards the Harijans of the Taluk. They demand that both these Officers should be transferred immediatly as they allege that these Officers do not take adequate interest in the welfare of the Scheduled Caste in the matter of extending the benifits from various Government Schemes. Though they have discontinued their strike on intervention, They insist action against the above Officers. It is strange that no Officer has taken notice of the strike by the Dalit Action Committee. An immediate action against the officials concerned is called for.

ಶ್ರೀ ಜಿ. ನಾರಾಯಣಸ್ವಾಮಿ.—ನಮ್ಮ ಸರಕಾರ ಕನ್ನಡ ಆಡಳಿತ ಭಾಷಾವರ್ಷ ಎಂದು ಹೇಳಿದ್ದಾರೆ. ನೀವು ಇಂಗ್ಲಿಷ್‌ನಲ್ಲಿ ಓದುತ್ತಿದ್ದೀರಿ ?

(ಗೊಂದಲ)

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಅಧ್ಯಕ್ಷರು.—ಬಂಗಾರಪ್ಪನವರನ್ನು ಬಿಟ್ಟು ಯಾರು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಎಂದು ಹೇಳಬೇಕಾಗುತ್ತದೆ.

ಶ್ರೀ ಎಂ. ರಾಮಪ್ಪ.—ಪಾಯಿಂಟ್ ಆಫ್ ಆರ್ಡರ್.....

ಶ್ರೀ ಜಿ. ನಾರಾಯಣಸ್ವಾಮಿ.—ಒಳ್ಳೆಯ ವಿಷಯ ಮಾತನಾಡಿದರೂ ಹೀಗೆ ಅಂದರೆ ಹೇಗೆ ಸ್ವಾಮಿ.

ಶ್ರೀ ಎಂ ರಾಮಪ್ಪ.—ಅಧ್ಯಕ್ಷರೇ, ಕನ್ನಡದಲ್ಲಿಯೇ ಮಾತನಾಡಬೇಕು ಇಂಗ್ಲಿಷ್‌ನಲ್ಲಿ ಮಾತನಾಡಬಾರದು, ಬೇರೆ ಲಾಂಗ್ವೇಜ್‌ನಲ್ಲಿ ಮಾತನಾಡಬಾರದು ಎಂದು ತಾವು ಏನಾದರೂ ರೂಲಿಂಗ್ ಕೊಟ್ಟಿದ್ದೀರಾ ? ಆ ರೀತಿ ಏನಾದರೂ ಇದ್ದರೆ, ನಾರಾಯಣಸ್ವಾಮಿರವರ ಆಕ್ಷೇಪವನ್ನು ಒಪ್ಪಿಕೊಳ್ಳುತ್ತೇವೆ. ಈ ರೀತಿ ಪದೇಪದೇ, ನಮ್ಮ ಅಸೆಂಬ್ಲಿ ವ್ಯವಹಾರ ನೋಡಿದರೆ, ಇದು ಒಂದು ಹವ್ಯಾಸ ಆಗಿ ಬಿಟ್ಟಿದೆ. ಇದರ ಬಗ್ಗೆ ನಾವು ವಿಷಾದ ವ್ಯಕ್ತಪಡಿಸಬೇಕಾಗುತ್ತದೆ.

ಶ್ರೀ ಜಿ. ನಾರಾಯಣಕುಮಾರ್.—ನಮ್ಮ ಸರಕಾರದ ನೀತಿ ಕನ್ನಡ ಆಡಳಿತ ಭಾಷೆ ಆಗ ಬೇಕಾಬುದು ಮಾನ್ಯ ಬಂಗಾರಪ್ಪನವರು ಕನ್ನಡದ ಅಭಿಮಾನಿಗಳು, ಕನ್ನಡದಲ್ಲಿ ಒಳ್ಳೆಯ ಭಾಷಣಕಾರರು, ಅವರು ಇಂಗ್ಲಿಷ್‌ನಲ್ಲಿ ಓದುತ್ತಿದ್ದಾರೆ,

ಅಧ್ಯಕ್ಷರು.—ಅವರು ನನ್ನ ಪರವಾನಗಿ ತೆಗೆದುಕೊಂಡು ಇಂಗ್ಲಿಷ್‌ನಲ್ಲಿ ಓದಿದ್ದಾರೆ.

ಶ್ರೀ ಜಿ. ನಾರಾಯಣಕುಮಾರ್. ನಾನು ಬಂಗಾರಪ್ಪನವರಿಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಸ್ ಬಂಗಾರಪ್ಪ.—ನಾರಾಯಣಕುಮಾರ್‌ರವರೂ ನಾವು ನಿನ್ನೆ ಅರ್ಧ ಗಂಟೆ ಕಾಲ ಇಂಗ್ಲೀಷ್‌ನಲ್ಲಿ ಮಾತನಾಡಿದ್ದೇವೆ, ಅವರು ಒಂದು ಕನ್ನಡ ಪದವನ್ನೂ ಬಳಸಲಿಲ್ಲ.

ಶ್ರೀ ಜಿ. ನಾರಾಯಣಕುಮಾರ್.—ಬಂಗಾರಪ್ಪನವರು ಸತ್ಯಕ್ಕೆ ದೂರವಾದ ಮಾತನಾಡುತ್ತಿದ್ದಾರೆ.

ಶ್ರೀ ಬಿ. ಆರ್. ಯಾವಗಲ್(ಗ್ರಾಮೀಣ ಅಭಿವೃದ್ಧಿ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಈ ಸಭೆಯ ಗಮನಕ್ಕೆ ತಂದ ವಿಷಯದ ಬಗ್ಗೆ ಮಾಹಿತಿಗಳು ಇಲ್ಲ. ಆದರೆ ಅವರು ಎತ್ತಿದಂಥ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ಅವರಿಗೆ ಪ್ರತ್ಯೇಕವಾದ ಹೇಳಿಕೆ ಬೇಕೆಂದು ಹೇಳಿದರೆ ತರಿಸಿಕೊಳ್ಳಬಹುದು.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಬೇಕು ಬೇಡ ಎಂಬ ಪ್ರಶ್ನೆ ಅಲ್ಲ. ಹೇಳಿಕೆ ಕೊಡಿ ಎಂದು ಅಧ್ಯಕ್ಷರು ರೂಲಿಂಗ್ ಕೊಟ್ಟಿದ್ದಾರೆ. ನಮ್ಮ ನಿಮ್ಮ ಪತ್ರವ್ಯವಹಾರ ಅಲ್ಲ ಇದು. ಈ ಸದನದಲ್ಲಿ ನಾವು ಹೇಳಿದಮೇಲೆ ಸದನದಲ್ಲೇ ಉತ್ತರ ಕೊಡಬೇಕು. ಇಲ್ಲೇ ಹೇಳಬೇಕು.

ಅಧ್ಯಕ್ಷರು.—ಸದನದಲ್ಲೇ ಉತ್ತರ ತರಿಸಿಕೊಡಿ.

ಶ್ರೀ ಬಿ. ಆರ್. ಯಾವಗಲ್.—ನನ್ನ ಹೇಳಿಕೆಯ ಮೇಲೆ ಅವರಿಗೆ ಸಮಾಧಾನವಾಗಬಹುದೆ ಎಂದು ತಿಳಿದುಕೊಂಡಿದ್ದೆ, ಹೇಳಿಕೆ ಬೇಕಾಗಿದ್ದರೆ ತರಿಸಿಕೊಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಎರಡು ಮೂರು ದಿವಸ ಆಯಿತು, ಮಾನ್ಯ ಸಹಕಾರ ಮಂತ್ರಿಗಳಿಗೆ ಮೂರು ನಾಲ್ಕು ಸಿಹಿಳರ ನೋಟೀಸು ಕಳುಹಿಸಿದ್ದೆ.

ಅಧ್ಯಕ್ಷರು.—ತಾವು ಓದಿ ಹೇಳಿ, ಎರಡು ದಿವಸದಲ್ಲಿ ಉತ್ತರ ಕೊಡುತ್ತೇವೆಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸಕ್ಕರೆ ಕಾರ್ಖಾನೆ ಮೊಲಾಸಿಸ್ ಬಗ್ಗೆ ನಿಯಮದ ಸಿಹಿಳರ ಮೇಲೆ ನೋಟೀಸ್ ಕೊಟ್ಟಿದ್ದೇನೆ, ಇನ್ನೂ ಬಂದಿಲ್ಲ,

ಅಧ್ಯಕ್ಷರು.—ಈಗ ನಿಮ್ಮ ಸಿಹಿಳರ ನೋಟೀಸ್ ಓದಿ ಹೇಳಿರಿ.

೧-೦೦ ಪಿ. ಎಂ.

೧೬. ನೀರಾವರಿ ಪಂಪುಸೆಟ್‌ಗೆ ವಿಧಿಸಿರುವ ವಿದ್ಯುತ್‌ದರದ ಬಗ್ಗೆ

ಶ್ರೀ ಎಸ್. ಮಲ್ಲಾರಗೌಡ ಪಾಟೀಲ್.—ರಾಜ್ಯದಲ್ಲಿಯ ಎಲ್ಲ ರೈತಾಪಿ ಜನಕ್ಕೆ ಪ್ರತಿ ಅಶ್ವಶಕ್ತಿಗೆ ಐವತ್ತು ರೂಪಾಯಿ ವಾರ್ಷಿಕ ಬಿಲ್ಲನ್ನು ತುಂಬುವಂತೆ ಆದೇಶಿಸಿ ಹತ್ತು ಅಶ್ವಶಕ್ತಿಯ ಎಲೆಕ್ಟ್ರಿಕ್ ಮೋಟಾರ್‌ಗಳಿಗೆ ವಿದ್ಯುತ್ ಮೋಟಾರ್‌ಗಳನ್ನು ಅಳವಡಿಸುತ್ತಿರುವುದು ಬರಗಾಲದಲ್ಲಿ ಸಿಕ್ಕಿರುವ ರೈತವರ್ಗಕ್ಕೆ ತುಂಬಾ ತೊಂದರೆಯನ್ನುಂಟುಮಾಡಿದೆ. ಪಕ್ಕದ ರಾಜ್ಯದಲ್ಲಿ ಅಂದರೆ ಮಹಾರಾಷ್ಟ್ರದಲ್ಲಿ ನೀರಾವರಿ ಪಂಪ್‌ಸೇಟ್‌ಗಳಿಗೆ ಇರುವ ಮಾದರಿ ಕರ್ನಾಟಕದಲ್ಲಿ ಕೂಡ ಆಚರಣೆಗೆ ತಂದು ಎಷ್ಟೇ ಅಶ್ವಶಕ್ತಿಯ ನೀರಾವರಿ ಪಂಪ್‌ಸೆಟ್‌ಗಳು ಇದ್ದರೂ ವಾರ್ಷಿಕ ಒಂದು ಅಶ್ವಶಕ್ತಿಗೆ ರೂಪಾಯಿ ಐವತ್ತರಂತೆ ಆಕಾರಣೆ ಮಾಡಿ ರೈತವರ್ಗಕ್ಕೆ ಆಗುತ್ತಿರುವ ತೊಂದರೆಯನ್ನು ನಿವಾರಿಸುವುದಕ್ಕಾಗಿ ನಾನು ಒತ್ತಾಯಿಸುತ್ತೇನೆ, ಕೆ. ಇ. ಬಿ. ಯಿಂದ ಅಥವಾ ಸರ್ಕಾರದಿಂದ ಕೊಟ್ಟಿರುವ ಆದೇಶವನ್ನು ಹಿಂದೆ ತೆಗೆದುಕೊಂಡು ಪ್ರತಿ ಅಶ್ವಶಕ್ತಿಗೆ ರೂಪಾಯಿ ಐವತ್ತರಂತೆ ಆಕರಣೆ ಮಾಡುವಂತೆ ಆದೇಶಿಸಲು ಸರ್ಕಾರದಿಂದ ಕ್ರಮ ಕೈಗೊಳ್ಳುವಂತೆ ಈ ಸೂಚನೆಯನ್ನು ನೀಡುತ್ತೇನೆ ಹಾಗೂ ಈ ಬಗ್ಗೆ ಮಾನ್ಯ